ಶ್ರೀ ಬಿ. ಇ. ರಾಮಯ್ಯ.—ಹಾಗಾದರೆ ಈ ವರ್ಷ ಕೆಲಸಗಳನ್ನೇಕೆ ಇನ್ನೂ ಪ್ರಾರಂಭಮಾಡಿಲ್ಲ ?

ಶ್ರೀ ಕಡಿದಾಳ್ ಮಂಜಪ್ಪ.—ಜನರಿಗೆ ಶಾಂತಿ ಸಮಾಧಾನ ಇದರಿಂದ ಅಷ್ಟು ಬೇಗ ಉಂಟಾಗುವುದಾದರೆ ಬೇಗನೇ ಪ್ರಾರಂಭಿಸಲಾಗುತ್ತದೆ.

ಶ್ರೀ ಕೆ. ಎಲ್. ನರಸಿಂಹಯ್ಯ.—ಈ ಕ್ಷಾಮ ನಿವಾರಣೆಯ, ಕೆಲಸಕಾರ್ಯಗಳಿಗಾಗಿ ಯಾವ ಯಾವ ಜಿಲ್ಲೆಗಳಿಗೆ ಎಷ್ಟೆಷ್ಟು ಹಣವನ್ನೊದಗಿಸಿದ್ದೀರಿ ?

Sri Kadidal MANJAPPA.—It is a general question.

ಶ್ರೀ ಟಿ. ಹನುಮಯ್ಯ.—ಕ್ಷಾಮ ನಿವಾರಣೆಯ ಬಗ್ಗೆ ಕೈಗೊಂಡಿರುವ ಶಾಶ್ವತ ಕಾರ್ಯಗಳಾವುವು ; ತಾತ್ಕಾಲಿಕವಾದವುಗಳಾವುವು ?

ಶ್ರೀ ಕಡಿದಾಳ್ ಮಂಜಪ್ಪ.—ಶಾಶ್ವತ ಕಾರ್ಯಗಳೆಂದರೆ ತುಂಗಭದ್ರ ನೀರಾವರಿ ಕಾಂಗಾರಿ; ಭದ್ರ ನೀರಾವರಿ ಕಾಂಗಾರಿ ತುಂಗಾ ಜಲಾಶಯ ; ಘಟಪ್ರಭಾ ಕಾಂಗಾರಿ ; ಮತ್ತು ಇನ್ನೂ ಅನೇಕ ನಣ್ಣ ಪುಟ್ಟ. ನೀರಾವರಿ ಕಾಂಗಾರಿಗಳು ; ಇರಿಗೇಷನ್ ಪ್ರಾಜೆಕ್ಟ್‌ಗಳು ಮತ್ತು ಬಂಡಿಂಗ್ ಕಾಂಗಾರಿ ಇತ್ಯಾದಿ.

ಶ್ರೀ ಜಿ. ಎಸ್. ಬೊಪ್ಪೇಗೌಡ.—ಈ ಸಂಬಂಧವಾಗಿ ಶಾಶ್ವತ ಪರಿಹಾರಗಳೇನೆಂಬುದನ್ನು ಸೂಚಿಸುವುದಕ್ಕೆ ಒಂದು ಸಮಿತಿಯನ್ನು ರಚಿಸುವುದಾಗಿ ಮಂತ್ರಿಗಳು ಅಪ್ಪಣೆ ಕೊಡಿಸಿದ್ದರು. ಈಗ ಆ ಸಮಿತಿಯನ್ನು ರಚಿಸಿದ್ದಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಒಂದು ಅಡ್ವೈಜರಿ ಬಾಡಿಯನ್ನು ನೇಮಿಸತಕ್ಕ ಬಗ್ಗೆ ಪರ್ಯಾಲೋಚನೆ ಮಾಡುತ್ತಿದ್ದೇವೆ.

ಶ್ರೀ ಬಿ. ಇ. ರಾಮಯ್ಯ—ಹಾ ಚೊಳ್ಳಿ ಫಿರ್ಕಾದಲ್ಲಿ ಸೇಕಡ 75 ರಷ್ಟು ರೆಮಿಷ್ ಕೊಟ್ಟು ಉಳಿದ ಗ್ರಾಮಗಳಲ್ಲಿ ಸೇಕಡ 50 ಪರ್‌ಸೆಂಟ್ ರೆಮಿಷ್ ಕೊಡಲು ಕಾರಣವೇನೆಂಬುದನ್ನು ತಿಳಿಸುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಸೇಕಡ 50 ರೆಮಿಷ್. ಕೊಟ್ಟಿರುವ ಗ್ರಾಮಗಳಲ್ಲಿ ಪರಿಸ್ಥಿತಿ ಸ್ವಲ್ಪ ಉತ್ತಮವಾಗಿದೆ. ಅದಕ್ಕೋಸ್ಕರ ಹಾಗೆ ಮಾಡಿದ್ದೇವೆ.

ಶ್ರೀ ಬಿ. ಇ. ರಾಮಯ್ಯ.—ಸಿರಗುಪ್ಪ ತಾಲ್ಲೂಕು ಬರಗಾಲ ಪ್ರದೇಶವಾದ್ದರಿಂದ ಎಲ್ಲ ಕಡೆಗಳಲ್ಲಿಯೂ ಸೇಕಡ 75 ಪರ್‌ಸೆಂಟ್ ರೆಮಿಷ್ ಏಕೆ ಕೊಡಬಾರದು ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಅಭಿಪ್ರಾಯದ ಮಾತು.

ಶ್ರೀ ಬಿ. ಇ. ರಾಮಯ್ಯ.—ಆ ಭಾಗದಲ್ಲಿರುವ ವ್ಯವಸಾಯಗಾರರಿಗೆ ತಮ್ಮ ಭೂಮಿಯನ್ನು ಅಭಿವೃದ್ಧಿ ಪಡಿಸಲು ಎಷ್ಟು ಸಾಲವನ್ನು ಯಾವಾಗ ಕೊಟ್ಟಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ತಕಾವಿ ಸಾಲಗಳನ್ನು ಕೊಡುತ್ತಿದ್ದೇವೆ. Land improvement loans ಕೊಡುತ್ತಿದ್ದೇವೆ. ಇಷ್ಟೇ ಕೊಟ್ಟಿದ್ದೇವೆಂದು ಹೇಳುವುದಕ್ಕೆ ನನ್ನ ಹತ್ತಿರ ವಿವರಗಳಿಲ್ಲ.

Murder and Theft Cases in the Villages of Ramdurg Taluk.

*Q.—363. Sri M. S. PATTAN (Ramdurg).—

Will the Government be pleased to state :

(*a*) whether they are aware of the recent increase in the number of cases of murder and theft at Mudakavi, Thimmapur, Mudenur, Vudapdi and Bidike villages in Ramdurg Taluk ;

(*b*) whether they have ascertained the reasons for this increase ?

A.—Sri B. D. JATTI (Chief Minister).—

(*a*) No.

(*b*) Does not arise in view of the reply to question (*a*) above.

ಶ್ರೀ ಎಂ. ಎಸ್. ಪಟ್ಟಣ್.—(ಎ) ಭಾಗಕ್ಕೆ ಉತ್ತರವಾಗಿ 'ಇಲ್ಲ' ಎಂದು ಹೇಳಿದ್ದೀರಿ. ಆದರೆ ಮುಡಕಾವಿಯಲ್ಲಿ ಹಿಂದೆ ಹರಿಜನರ ಒಂದು ಕೊಲೆಯಾಗಿದ್ದು ಪತ್ತೆ ಇಲ್ಲ. ಈಗ ಒಂದು ಕೊಲೆಯಾಗಿದೆ. ಅಲ್ಲಯ ಗೌಡ, ಕುಲಕರ್ಣಿ ಮತ್ತು ಪೋಲೀಸರು ತನಿಖೆ ಮಾಡದೆ ಇದ್ದು ಅಲ್ಲಯ ಪಂಚಾಯಿತಿಯವರು ರಾಮದುರ್ಗಕ್ಕೆ ಹೋಗಿ ವರದಿ ಕೊಟ್ಟಾಗ ಮಾತ್ರ ಗುನ್ನೆ ದಾಖಲು ಮಾಡಿಕೊಂಡಿದ್ದಾರೆ. ಇದು ಸರ್ಕಾರದ ಲಕ್ಷ್ಯಕ್ಕೆ ಬಂದಿದೆಯೇ ?

Sri B. D. JATTI.—For the years, 1956, 1957, 1958 and 1959, there was only one murder in the year 1959 and there were no murders during the remaining three years.

ಶ್ರೀ ಎಂ. ಎಸ್. ಪಟ್ಟಣ್.—ಒಂದು ತಿಂಗಳಿಗೆ ಮುಂಚೆ ಕೊಲೆಯಾದದ್ದು ತಮ್ಮ ಲಕ್ಷ್ಯಕ್ಕೆ ಬಂದಿದೆಯೇ ?

Sri B. D. JATTI.—I have given information up to the date when this question was replied.

ಶ್ರೀ ಎಂ. ಎಸ್. ಪಟ್ಟಣ್.—ರಾಮದುರ್ಗ ತಾಲ್ಲೂಕಿನಲ್ಲಿ ನಾಲ್ಕೈದು ತಿಂಗಳುಗಳಿಂದ ಕೊಲೆಯಾಗಿದೆ.

ಶ್ರೀ ಬಿ. ಡಿ. ಜತ್ತಿ.—ನಾನು ಹೇಳಿದ್ದು, ಈ ಪ್ರಶ್ನೆಗೆ ಉತ್ತರ ಕೊಟ್ಟ ತಾರೀಖಿನವರೆಗೆ ಎಲ್ಲ ಸರಿಯಾದ ಮಾಹಿತಿಯನ್ನು ಕೊಟ್ಟಿದ್ದೇನೆ. ಅದರ ನಂತರ ಏನಾದರೂ ನಡೆದಿದ್ದರೆ ಬೇರೆ ಪ್ರಶ್ನೆಯನ್ನು ಕೇಳಬೇಕು.

Mr. DEPUTY SPEAKER.—Question time is over.

QUESTIONS FOR ANSWERS ON THE DAY.

(but not taken up)

Lease Amounts of weekly Shandies in Mysore District.

*Q.—210. Sri G. VENKATAI GOWDA (Palaiyam).—

Will the Government be pleased to state :—

(*a*) the total bid amount for the weekly shandies leased by the Mysore